# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಗ್ರಾಮ ಪಂಚಾಯಿತಿ ದೂರದೃಷ್ಟಿ ಯೋಜನೆ ತಯಾರಿಕೆಗೆ ಗ್ರಾಮ ಸಮಿತಿ, ಗ್ರಾಮ ಪಂಚಾಯತಿ ಸಮಿತಿಗಳನ್ನು ರಚಿಸುವ ಕುರಿತು.

**ಓದಲಾಗಿದೆ:** 1 ಸರ್ಕಾರ ಆದೇಶ ಸಂಖ್ಯೆ: ಗ್ರಾಅಪ /270/ ಗ್ರಾಪಂಅ/ 2021, ದಿನಾಂಕ: 27.07.2021.

2. ಭಾರತ ಸರ್ಕಾರದ ಪಂಚಾಯತ್ ರಾಜ್ ಮಂತ್ರಾಲಯದ ಸುಸ್ಥಿರ ಅಭಿವೃದ್ಧಿ ಗುರಿಗಳ ಸ್ಥಳೀಕರಣ ವರದಿ.

3. ಸರ್ಕಾರದ ಆದೇಶ ಸಂಖ್ಯೆ:ಕಪಂರಾಅ/ಅಭಿವೃದ್ಧಿ/406/2022, ಬೆಂಗಳೂರು, ದಿನಾಂಕ: 16.08.2022.

*****

**ಪ್ರಸ್ತಾವನೆ:-**

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 309 (ಬಿ) ರನ್ವಯ ಗ್ರಾಮ ಪಂಚಾಯಿತಿಗಳು ಹೊಸದಾಗಿ ರಚನೆಯಾದ ಮೂರು (3) ತಿಂಗಳಲ್ಲಿ ಐದು (5) ವರ್ಷಗಳ ದೂರದೃಷ್ಟಿ ಯೋಜನೆಯನ್ನು ತಯಾರಿಸುವುದು ಕಡ್ಡಾಯವಾಗಿರುತ್ತದೆ. ಸದರಿ ಯೋಜನೆಯನ್ನು ಸಿದ್ಧಪಡಿಸುವ ಸಂದರ್ಭದಲ್ಲಿ ಜನವಸತಿ ಸಭಾ, ವಾರ್ಡ್ ಸಭಾ ಮತ್ತು ಗ್ರಾಮಸಭೆಗಳ ಸದಸ್ಯರನ್ನು ಮತ್ತು ಸಂಪನ್ಮೂಲಗಳನ್ನು ಗಮನದಲ್ಲಿಟ್ಟುಕೊಂಡು ಸಹಭಾಗೀ ಗ್ರಾಮೀಣ ಪರಾಮರ್ಶೆಯ ಮೂಲಕ ಸಿದ್ಧಪಡಿಸಬೇಕಿದೆ. ಈ ಪ್ರಯತ್ನದಲ್ಲಿ ಸ್ಥಳೀಯ ಗುರಿಗಳನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರವು ಸ್ಥಾಪಿಸಿದ ಅಭಿವೃದ್ಧಿ ಮೈಲಿಗುರುತುಗಳ ಆಧಾರವನ್ನಾಗಿಸಿ ಗುರುತಿಸಬೇಕಿರುತ್ತದೆ. ಇದರಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯಗಳನ್ನೊಳಗೊಂಡು ಇತರೆ ಅಭಿವೃದ್ಧಿ ಇಲಾಖೆಗಳ ವಿಷಯಗಳನ್ನು ಪರಾಮರ್ಶಿಸುವ ಮುಖೇನ ಸಮಗ್ರ ಮತ್ತು ಸುಸ್ಥಿರ ಅಭಿವೃದ್ಧಿಯನ್ನು ಸಾಧಿಸುವುದಾಗಿರುತ್ತದೆ. ಇದಕ್ಕೆ ಪೂರಕವೆಂಬಂತೆ ಅಧಿನಿಯಮದ ಪ್ರಕರಣ 58 ರಲ್ಲಿ ಗ್ರಾಮ ಪಂಚಾಯತಿಗಳು ನಿರ್ದಿಷ್ಟಪಡಿಸಿದ ಪ್ರಕಾರ್ಯಗಳನ್ನು ನೆರವೇರಿಸಬೇಕಿದ್ದು, ಅನುಸೂಚಿ-1 ರ ಪಟ್ಟಿಯ ವಿಷಯಗಳನ್ನು ಸೇರಿದಂತೆ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ನೆರವೇರಿಸಬೇಕಾಗಿರುತ್ತದೆ.

ಸ್ವಯಂ ಆಡಳಿತದ ಸಂಸ್ಥೆಗಳಾದ ಗ್ರಾಮ ಪಂಚಾಯಿತಿಗಳು ಸಮಗ್ರ ಅಭಿವೃದ್ಧಿಯನ್ನು ಸಾಧಿಸುವುದು ಮತ್ತು ಸಾಮಾಜಿಕ ನ್ಯಾಯ ಸ್ಥಾಪನೆಗಾಗಿ ಸುರಕ್ಷಿತವಲ್ಲದ ವರ್ಗಗಳ ಅಭಿವೃದ್ಧಿಗೆ ಒತ್ತು ನೀಡಿ ಜನರ ಸಮಸ್ಯೆಗಳು ಮತ್ತು ಅಗತ್ಯಗಳ ಆಧಾರದ ಮೇಲೆ ಕೆಳಹಂತದಿಂದ ಯೋಜನೆಗಳನ್ನು ಸಿದ್ಧಪಡಿಸಬೇಕಾಗಿರುತ್ತದೆ. ಪ್ರತಿ ಗ್ರಾಮ ಪಂಚಾಯಿತಿಯು ಐದು ವರ್ಷಗಳ ದೂರದೃಷ್ಟಿ ಯೋಜನೆಯಿಂದ ಪ್ರತಿ ವರ್ಷದ ವಾರ್ಷಿಕ ಯೋಜನೆಗಳನ್ನು ರೂಪಿಸುವುದನ್ನು ಕಡ್ಡಾಯಗೊಳಿಸಲಾಗಿದೆ.

ಜಾಗತಿಕ ಮಟ್ಟದಲ್ಲಿ ಭಾರತವನ್ನು ಸೇರಿದಂತೆ 2030ನೇ ಇಸವಿಯೊಳಗೆ ಸುಸ್ಥಿರ ಅಭಿವೃದ್ಧಿ ಗುರಿಗಳ ಭಾಗವಾಗಿ 17 ಗುರಿಗಳನ್ನು ಸಾಧಿಸಬೇಕಿರುತ್ತದೆ. ಗ್ರಾಮೀಣ ಪ್ರದೇಶದಲ್ಲಿನ ಸಾಧನೆಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮತ್ತು ಇತರೆ ಅಭಿವೃದ್ಧಿ ಇಲಾಖೆಗಳ ಸಹಭಾಗಿತ್ವದೊಂದಿಗೆ ಅನುಷ್ಠಾನಿಸಬೇಕಿರುತ್ತದೆ. ಇದರ ಮುಂದುವರೆದ ಭಾಗವಾಗಿ ಭಾರತ ಸರ್ಕಾರದ ಪಂಚಾಯತ್ ರಾಜ್ ಮಂತ್ರಾಲಯವು ಸುಸ್ಥಿರ ಅಭಿವೃದ್ಧಿ ಗುರಿಗಳ ಸ್ಥಳೀಕರಣ ಪ್ರಕ್ರಿಯೆಗಾಗಿ ತಜ್ಞರ ಸಮಿತಿಯೊಂದನ್ನು 2021ರಲ್ಲಿ ರಚಿಸಲಾಯಿತು. ಸಮಿತಿಯ ವರದಿಯ ಪ್ರಕಾರ ಗ್ರಾಮ ಪಂಚಾಯತಿಗಳಲ್ಲಿ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸುವ ನಿಟ್ಟಿನಲ್ಲಿ 9 ವಲಯಗಳನ್ನು ಗುರುತಿಸಲಾಗಿರುತ್ತದೆ ಮತ್ತು ವಲಯವಾರು ಸೂಚ್ಯಂಕಗಳನ್ನು ಸುಸ್ಥಿರ ಅಭಿವೃದ್ಧಿ ಗುರಿಗಳ ಅನ್ವಯ ಶಿಫಾರಸ್ಸು ಮಾಡಿರುತ್ತಾರೆ.

ಗ್ರಾಮ ಪಂಚಾಯತಿ ದೂರದೃಷ್ಟಿ ಯೋಜನೆಯನ್ನು ಸಿದ್ಧಪಡಿಸುವ ಸಂದರ್ಭದಲ್ಲಿ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಅಭಿವೃದ್ಧಿ ಗುರಿಗಳನ್ನು ಸಾಧಿಸಲು ಸಹಕಾರಿಯಾಗುವಂತೆ ಮಾನವ ಅಭಿವೃದ್ಧಿ ಮತ್ತು ಸ್ಥಳೀಕರಣಗೊಂಡಿರುವ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸುವತ್ತ ಗ್ರಾಮ ಪಂಚಾಯಿತಿಗಳು ಕ್ರಮ ವಹಿಸಸಬೇಕಾಗಿದೆ.

ಉಲ್ಲೇಖ(3) ರ ಆದೇಶದ ಮೂಲಕ ದೂರದೃಷ್ಠಿ ಯೋಜನೆ ಸಿದ್ಧಪಡಿಸಲು ಅಗತ್ಯವಿರುವ ನಿರ್ದೇಶನಗಳನ್ನು ನೀಡಲಾಗಿರುತ್ತದೆ.

ಈ ಮೇಲ್ಕಂಡ ಪ್ರಸ್ತಾಪಿತ ಅಂಶಗಳು ಹಾಗೂ ಗುರಿಗಳನ್ನು ಸಾಧಿಸುವ ನಿಟ್ಟಿನಲ್ಲಿ ದೂರದೃಷ್ಠಿ ಯೋಜನೆ ಸಿದ್ಧಪಡಿಸಲು ಗ್ರಾಮ ಮಟ್ಟದ ಮತ್ತು ಗ್ರಾಮ ಪಂಚಾಯತಿ ಯೋಜನಾ ಸಮಿತಿಗಳನ್ನು ರಚಿಸಲು ತೀರ್ಮಾನಿಸಲಾಗಿದೆ. ಆದ್ದರಿಂದ ಈ ಕೆಳಕಂಡ

**ಆದೇಶ**

**ಸಂಖ್ಯೆ:ಕಪಂರಾಆ/ಅಭಿವೃದ್ಧಿ/406/2022, ಬೆಂಗಳೂರು, ದಿನಾಂಕ:17.09.2022**

ಮೇಲ್ಕಂಡ ಪ್ರಸ್ತಾವನೆಯ ಅಂಶಗಳ ಹಿನ್ನೆಲೆಯಲ್ಲಿ ಗ್ರಾಮ ಪಂಚಾಯತಿ ದೂರದೃಷ್ಠಿ ಯೋಜನೆಯನ್ನು ಸಿದ್ಧಪಡಿಸಲು ಗ್ರಾಮ ಯೋಜನಾ ಸಮಿತಿ ಮತ್ತು ಗ್ರಾಮ ಪಂಚಾಯತಿ ಯೋಜನಾ ಸಮಿತಿಯನ್ನು ಈ ಕೆಳಗಿನಂತೆ ರಚಿಸಿ ಆದೇಶಿಸಿದೆ:

**ಗ್ರಾಮ ಯೋಜನಾ ಸಮಿತಿ:**

| | | |
|---|---|---|
| 1. | ಗ್ರಾಮದ ವಾರ್ಡ್ ಸದಸ್ಯರು | ಅಧ್ಯಕ್ಷರು<br>(ಗ್ರಾಮದ ಸದಸ್ಯರಲ್ಲಿ ಒಬ್ಬರನ್ನು ಆಯ್ಕೆ ಮಾಡಿಕೊಳ್ಳುವುದು). |
| 2. | ಗ್ರಾಮದ ಇತರೆ ಎಲ್ಲಾ ಚುನಾಯಿತ ಸದಸ್ಯರು | ಸದಸ್ಯರು |
| 3. | ಗ್ರಾಮದ ಇತರೆ ಅಭಿವೃದ್ಧಿ ಇಲಾಖೆಗಳ ಅಧಿಕಾರಿ/ಸಿಬ್ಬಂದಿಗಳು | ಸದಸ್ಯರು |

| | | |
|---|---|---|
| 4. | ಆಸಕ್ತ ಸ್ಥಳೀಯ ನಿವೃತ್ತ ಅಧಿಕಾರಿ/ಸಿಬ್ಬಂದಿ (ವಲಯವಾರು ಒಬ್ಬರಂತೆ) | ಸದಸ್ಯರು |
| 5. | ವಿಷಯತಜ್ಞರು (ವಲಯವಾರು ಲಭ್ಯವಿದ್ದಲ್ಲಿ) | ಸದಸ್ಯರು |
| 6. | ಸ್ಥಳೀಯ ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳು | ಸದಸ್ಯರು |
| 7. | ಗ್ರಾಮದ ಮಹಿಳಾ ಸ್ವ ಸಹಾಯ ಸಂಘಗಳ ಗುಂಪಿನ ಕ್ರಿಯಾಶೀಲ ಸದಸ್ಯರುಗಳು ಹಾಗೂ ಗ್ರಾಮ ಪಂಚಾಯತಿಯು ಅವಶ್ಯವೆಂದು ಪರಿಗಣಿಸುವ ಇತರೆ ವ್ಯಕ್ತಿಗಳು | ಸದಸ್ಯರು |
| 8. | ಸಾಮಾಜಿಕ ಪರಿಶೋಧನೆಯ ಗ್ರಾಮ ಸಂಪನ್ಮೂಲ ವ್ಯಕ್ತಿ | ಸದಸ್ಯರು |
| 9. | ಗ್ರಾಮ ಪಂಚಾಯತಿ ಕಾರ್ಯದರ್ಶಿ (ಇಲ್ಲವಾದಲ್ಲಿ ಪಂಚಾಯುತಿ ಅಭಿವೃದ್ಧಿ ಅಧಿಕಾರಿ | ಸದಸ್ಯ ಕಾರ್ಯದರ್ಶಿ |

**ಸೂಚನೆ:** ಕ್ರಮ ಸಂಖ್ಯೆ 4 ರಿಂದ 7 ರವರೆಗಿನ ಸದಸ್ಯರನ್ನು ಗ್ರಾಮ ಪಂಚಾಯತಿಯು ಆಯ್ಕೆ ಮಾಡಬೇಕು.

**ಗ್ರಾಮ ಯೋಜನಾ ಸಮಿತಿಯ ಜವಾಬ್ದಾರಿಗಳು:**

- ಗ್ರಾಮ ಪಂಚಾಯತಿ ವ್ಯಾಪ್ತಿಯ ಪ್ರತಿ ಗ್ರಾಮಕ್ಕೆ (ಗ್ರಾ.ಪಂ. ಕೇಂದ್ರಸ್ಥಾನವು ಸೇರಿದಂತೆ) ಗ್ರಾಮ ಯೋಜನಾ ಸಮಿತಿಯನ್ನು ಸರ್ಕಾರವು ನಿಗದಿಪಡಿಸಿರುವಂತೆ ರಚಿಸುವುದು. ಸದರಿ ಸಮಿತಿಯ ಸಭೆಯನ್ನು ಆಯೋಜಿಸಿ, ಗ್ರಾಮ ಮಟ್ಟದ ಯೋಜನಾ ತಯಾರಿಗೆ ಅಗತ್ಯ ಕ್ರಮಗಳ ಬಗ್ಗೆ ಚರ್ಚೆ.
- ಗ್ರಾಮ ಮಟ್ಟದ ಇತರೆ ಅಭಿವೃದ್ಧಿ ಇಲಾಖೆಗಳ ಅಧಿಕಾರಿ / ಸಿಬ್ಬಂದಿಗಳೊಂದಿಗೆ ನಿಗದಿತ ನಮೂನೆಯಲ್ಲಿ ಅಗತ್ಯ ಮಾಹಿತಿ ಸಂಗ್ರಹಿಸಲು ಸಮನ್ವಯತೆ ಸಾಧಿಸುವುದು.
- ಕೇಂದ್ರೀಕೃತ ಗುಂಪು ಚರ್ಚೆಗಳನ್ನು ಎಲ್ಲಾ ವಲಯಗಳಿಗೆ ಸಂಬಂಧಿಸಿದಂತೆ ಆಯೋಜಿಸುವುದು. ಉದಾ: ಮಹಿಳೆಯರ ಆರೋಗ್ಯ ಸಮಸ್ಯೆಗಳನ್ನು ಚರ್ಚಿಸಲು ಮಹಿಳೆಯರ ಗುಂಪು, ಶಿಕ್ಷಣ ಮತ್ತು ಮಕ್ಕಳ ಸಮಸ್ಯೆಯನ್ನು ಚರ್ಚಿಸಲು ಮಕ್ಕಳ ಗುಂಪು, ಕೃಷಿ ಮತ್ತು ಇತರೆ ಸಮಸ್ಯೆಗಳನ್ನು ಚರ್ಚಿಸಲು ರೈತರ ಗುಂಪು, ಹಿರಿಯ ನಾಗರೀಕರ ಆರೋಗ್ಯ ಮತ್ತು ಪಿಂಚಣಿ, ಇತ್ಯಾದಿ ಸಮಸ್ಯೆಗಳನ್ನು ಚರ್ಚಿಸಲು ಹಿರಿಯ ನಾಗರೀಕರ ಗುಂಪು, ಕೌಶಲ್ಯಾಭಿವೃದ್ಧಿ ಮತ್ತು ಉದ್ಯೋಗೀಕರಣಕ್ಕೆ ಸಂಬಂಧಿಸಿದಂತೆ ಯುವಕ-ಯುವತಿಯರ ಗುಂಪು, ಇತ್ಯಾದಿ. ಪ್ರತಿ ಗುಂಪಿನ ಚರ್ಚೆಗೆ ಯೋಜನಾ ಸಮಿತಿಯಲ್ಲಿನ ಒಬ್ಬರು ಸುಗಮಗಾರರಾಗಿ ಕಾರ್ಯನಿರ್ವಹಿಸುವುದರ ಮುಖೇನ ಚರ್ಚೆಯು ಸೂಕ್ತ ರೀತಿಯಲ್ಲಿ ನಡೆಯುವಂತೆ ಗಮನವಹಿಸುವುದು.

- ಯೋಜನಾ ಸಮಿತಿಯ ಸದಸ್ಯರುಗಳು ಎರಡು ಸಣ್ಣ ತಂಡಗಳಾಗಿ ವಿಂಗಡಿಸಿಕೊಳ್ಳುವುದು. ಎರಡು ತಂಡಗಳು ಗ್ರಾಮದ 'ಗ್ರಾಮೀಣ ಸಹಭಾಗಿತ್ವ ಸಮೀಕ್ಷೆ'ಯನ್ನು ನಡೆಸಬೇಕಿರುತ್ತದೆ. ಸಮೀಕ್ಷೆಯ ಭಾಗವಾಗಿ ಅಡ್ಡ ನಡಿಗೆ, ಸಾಮಾಜಿಕ ನಕ್ಷೆ ಮತ್ತು ಸಂಪನ್ಮೂಲ ನಕ್ಷೆಯನ್ನು ಕಡ್ಡಾಯವಾಗಿ ಪ್ರಕ್ರಿಯೆಯನ್ವಯ ಬಿಡಿಸುವುದು.
- ಜನವಸತಿ ಮತ್ತು ವಾರ್ಡ್ವಾರು ಭಾಗಗಳ ಸಭೆಯನ್ನು ಆಯೋಜಿಸುವುದು ಹಾಗೂ ಅದರಲ್ಲಿ ಈಗಾಗಲೇ ಸಂಗ್ರಹಿಸಿರುವ ಮಾಹಿತಿಯನ್ನು ಚರ್ಚಿಸಿ, ಅಂತಿಮಗೊಳಿಸುವುದು.

**ಗ್ರಾಮ ಪಂಚಾಯತಿಯ ಯೋಜನಾ ಸಮಿತಿ:**

| | | |
|---|---|---|
| 1. | ಗ್ರಾಮ ಪಂಚಾಯತಿ ಅಧ್ಯಕ್ಷರು | ಅಧ್ಯಕ್ಷರು |
| 2. | ಉಪಾಧ್ಯಕ್ಷರು ಮತ್ತು ಎಲ್ಲಾ ಸದಸ್ಯರುಗಳು | ಸದಸ್ಯರು |
| 3. | ಗ್ರಾಮ ಪಂಚಾಯತಿ ಕೇಂದ್ರ ಸ್ಥಾನದ ಇತರೆ ಅಭಿವೃದ್ಧಿ ಇಲಾಖೆಗಳ ಅಧಿಕಾರಿ/ಸಿಬ್ಬಂದಿಗಳು/ಸದಸ್ಯರು | ಸದಸ್ಯರು |
| 4. | ಆಸಕ್ತ ಸ್ಥಳೀಯ ನಿವೃತ್ತ ಅಧಿಕಾರಿ/ಸಿಬ್ಬಂದಿ(ವಲಯವಾರು ಒಬ್ಬರಂತೆ) | ಸದಸ್ಯರು |
| 5. | ವಿಷಯತಜ್ಞರು (ವಲಯವಾರು ಲಭ್ಯವಿದ್ದಲ್ಲಿ) | ಸದಸ್ಯರು |
| 6. | ಸ್ಥಳೀಯ ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳು | ಸದಸ್ಯರು |
| 7. | ಜಿ.ಪಿ.ಎಲ್.ಎಫ್. ಪ್ರತಿನಿಧಿಗಳು/ ಮಹಿಳಾ ಸ್ವ ಸಹಾಯ ಸಂಘಗಳ ಗುಂಪಿನ ಕ್ರಿಯಾಶೀಲ ಸದಸ್ಯರುಗಳು ಹಾಗೂ ಗ್ರಾಮ ಪಂಚಾಯತಿಯು ಅವಶ್ಯವೆಂದು ಪರಿಗಣಿಸುವ ಇತರೆ ವ್ಯಕ್ತಿಗಳು | ಸದಸ್ಯರು |
| 8. | ಸಾಮಾಜಿಕ ಪರಿಶೋಧನೆಯ ಗ್ರಾಮ ಸಂಪನ್ಮೂಲ ವ್ಯಕ್ತಿ | ಸದಸ್ಯರು |
| 9. | ಪಂಚಾಯುತಿ ಅಭಿವೃದ್ಧಿ ಅಧಿಕಾರಿ | ಸದಸ್ಯ ಕಾರ್ಯದರ್ಶಿ |

**ಸೂಚನೆ:** ಕ್ರಮ ಸಂಖ್ಯೆ 4 ರಿಂದ 7 ರವರೆಗಿನ ಸದಸ್ಯರನ್ನು ಗ್ರಾಮ ಪಂಚಾಯತಿಯು ಆಯ್ಕೆ ಮಾಡಬೇಕು.

**ಗ್ರಾಮ ಪಂಚಾಯಿತಿ ಯೋಜನಾ ಸಮಿತಿಯ ಜವಾಬ್ದಾರಿಗಳು:**

- ಪ್ರತಿ ಗ್ರಾಮ ಯೋಜನಾ ಸಮಿತಿಯಿಂದ ನಿಗದಿತ ನಮೂನೆಯಲ್ಲಿ ಸ್ವೀಕೃತವಾದ ಮಾಹಿತಿಯನ್ನು ಗ್ರಾಮ ಪಂಚಾಯತಿ ಹಂತಕ್ಕೆ ಕ್ರೋಡೀಕರಿಸುವುದು.
- ಈಗಾಗಲೇ ಸ್ವೀಕೃತಗೊಂಡಿರುವ ದ್ವಿತೀಯ ಮತ್ತು ಪ್ರಾಥಮಿಕ ದತ್ತಾಂಶಗಳನ್ನು ತಾಳೆ ಮಾಡುವುದರೊಂದಿಗೆ ಗ್ರಾಮ ಪಂಚಾಯತಿ ಹಂತದ ವಾಸ್ತವ ಸ್ಥಿತಿಯ ವಿಶ್ಲೇಷಣೆ ಮಾಡುವುದು.
- ಗ್ರಾಮ ಪಂಚಾಯತಿಯು ಸಾಧಿಸಬೇಕಾದ ಗುರಿಯನ್ನು ನಿಗದಿಪಡಿಸುವುದು.
- ಸಾಧಿಸಬೇಕಾದ ಗುರಿಗಳಿಗೆ ಅನುಷ್ಠಾನದ ಕಾಲಮಿತಿಯನ್ನು ಗುರುತಿಸುವುದು.
- ಅನುಷ್ಠಾನ ಕಾಲಮಿತಿಯಂತೆ ಅಗತ್ಯ ಚಟುವಟಿಕೆಗಳನ್ನು ಗುರುತಿಸುವುದು. ಅದಕ್ಕೆ ಅನುಗುಣವಾಗಿ ಜವಾಬ್ದಾರಿಯುತ ಇಲಾಖೆಗಳು, ಸಮಿತಿಗಳು, ಉಪಸಮಿತಿಗಳು ಹಾಗೂ ಸಮುದಾಯದವರನ್ನು ಪಟ್ಟಿ ಮಾಡುವುದು.
- ಗುರುತಿಸಿರುವ ಚಟುವಟಿಕೆಯು ಗ್ರಾಮ ಪಂಚಾಯತಿಗೆ ವೆಚ್ಚರಹಿತವೇ ಅಥವಾ ವೆಚ್ಚ ಸಹಿತವೇ ಎಂದು ಗುರುತಿಸುವುದು.
- ಸದರಿ ಚಟುವಟಿಕೆಯು ವೆಚ್ಚ ಸಹಿತವಾಗಿದ್ದಲ್ಲಿ, ಅದಕ್ಕೆ ತಗಲುವ ಅಂದಾಜು ವೆಚ್ಚವನ್ನು ರೂಪಾಯಿಗಳಲ್ಲಿ ನಮೂದಿಸುವುದು.
- ಮೇಲ್ಕಂಡ ಪ್ರಕ್ರಿಯೆಯನ್ನು ಸರ್ಕಾರವು ನಿಗದಿಪಡಿಸಿರುವ ಎಲ್ಲಾ ಎಂಟು ವಲಯಗಳಿಗೂ ಸಿದ್ಧಪಡಿಸುವುದು.
- ಹೀಗೆ ಸಿದ್ಧಪಡಿಸಿದ ನಮೂನೆಯ ಅಂತಿಮ ಮಾಹಿತಿಯನ್ನು ಗ್ರಾಮ ಪಂಚಾಯತಿ ಕರಡು ದೂರದೃಷ್ಠಿ ಯೋಜನೆ ಎಂದು ಕರೆಯಲಾಗುವುದು.

ಗ್ರಾಮ ಯೋಜನಾ ಸಮಿತಿ ಹಾಗೂ ಗ್ರಾಮ ಪಂಚಾಯತಿ ಯೋಜನಾ ಸಮಿತಿ ತಮಗೆ ನಿರ್ವಹಿಸಿರುವ ಮೇಲ್ಕಂಡ ಜವಾಬ್ದಾರಿಗಳನ್ನು ದೂರದೃಷ್ಠಿ ಯೋಜನೆ ಸಿದ್ಧಪಡಿಸುವಿಕೆಯ ಮಾರ್ಗಸೂಚಿಗಳು ಹಾಗೂ ಕಾಲಕಾಲಕ್ಕೆ ಸರ್ಕಾರದಿಂದ ಹೊರಡಿಸುವ ಆದೇಶಗಳು ಹಾಗು ನೀಡುವ ನಿರ್ದೇಶನಗಳಂತೆ ಕಾರ್ಯನಿರ್ವಹಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಎಲ್.ಕೆ. ಅತೀಕ್)**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ (ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ರವರಿಗೆ,**

1. ಎಲ್ಲಾ ಜಿಲ್ಲೆಗಳ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ನೋಡಲ್ ಅಧಿಕಾರಿಗಳಿಗೆ ಮೇಲ್ವಿಚಾರಣೆ ಮತ್ತು ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
3. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು. (ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ)
4. ರಾಜ್ಯದ ಎಲ್ಲಾ ಗ್ರಾಮ ಪಂಚಾಯತ್ ಅಧ್ಯಕ್ಷರು ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು. (ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ)

**ಪ್ರತಿಯನ್ನು:**

1. ಮಾನ್ಯ ಮುಖ್ಯಮಂತ್ರಿಗಳು ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ.
2. ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ, ಯೋಜನೆ, ಕಾಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಇವರ ಆಪ್ತ ಕಾರ್ಯದರ್ಶಿ.
5. ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಬೆಂಗಳೂರು
6. ಆಯುಕ್ತರು, ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು
7. ನಿರ್ದೇಶಕರು, ಅಬ್ದುಲ್ ನಜ಼ೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರು.
8. ಸಂಪಾದಕರು, ಕರ್ನಾಟಕ ವಿಕಾಸ ಪತ್ರಿಕೆ / ವೆಬ್‌ಸೈಟ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು
9. ಕಛೇರಿ ಪ್ರತಿ.